ಇವರಿಬ್ಬರೂ ನಿಧಾನವಾಗಿ ಒಂದರ ಮೇಲೊಂದು ಪ್ರಶ್ನೆ ಕೇಳಿದರು.

ಈಗ ಅಳು ತುಸು ಕಡಿಮೆಯಾಗಿದ್ದ ಅಜ್ಜಿ ಮುಸುಗುಡುತ್ತಲೇ ಹೇಳತೊಡಗಿತು.

'ಚಿಕ್ಕ ವಯಸ್ಸಿನಲ್ಲೇ ಮದುವೆಯಾದ ನನಗೆ ಎರಡು ಮಕ್ಕಳು. ಕಿರಿಯವನಿಗೆ ಇನ್ನೂ ನಾಲ್ಕು ವರ್ಷ ತುಂಬಿತ್ತಷ್ಟೆ. ಹಿರಿಯವ ಮೂರು ವರ್ಷಕ್ಕೆ ದೊಡ್ಡವನು. ಆಗಲೇ ಗಂಡ ನನ್ನನ್ನು ಬಿಟ್ಟು ಅದ್ಯಾವುದೋ ಮಾಟಗಾತಿಯನ್ನು ಕಟ್ಟಿಕೊಂಡು ದೂರ ಹೋದದ್ದು. ಅನಂತರದ ದಿನಗಳಲ್ಲಿ ಪಡಬಾರದ ಕಷ್ಟಪಟ್ಟೆ. ದುಡಿದೆ. ಯಾರು ಯಾರದೋ ಮನೆಯಲ್ಲಿ ಕಸ ಮುಸುರೆ ಬಳಿದೆ. ಇನ್ನೂ ಪ್ರಾಯದಲ್ಲಿದ್ದ ನನ್ನ ಮೇಲೆ ಕಣ್ಣು ಹಾಕಿದವರೆಷ್ಟೋ. ಅದೂ ಗಂಡ ಬಿಟ್ಟವಳು, ತಮಗೆ ಸುಲಭವಾಗಿ ದಕ್ಕಿಯಾಳು ಎನ್ನುವ ದುಷ್ಟ ಆಲೋಚನೆಯಲ್ಲಿ ನನ್ನ ಬೆನ್ನ ಹಿಂದೆಯೂ ಬಿದ್ದರು. ರಾತ್ರಿ ಹೊತ್ತು ಬಂದು ಮನೆ ಬಾಗಿಲನ್ನು ಬಡಿದವರೆಷ್ಟೋ. ಕೊನೆ ಕೊನೆಗೆ ಹಗಲಿನಲ್ಲೂ. ನಾನು ಯಾವುದಕ್ಕೂ ಬಗ್ಗಲಿಲ್ಲ. ನನ್ನ ಗುರಿಯೆಲ್ಲ ಒಂದೇ. ಮಕ್ಕಳನ್ನು ದೊಡ್ಡದು ಮಾಡಬೇಕು. ಅವರನ್ನು ಓದಿಸಬೇಕು. ಅಪ್ಪನಿಲ್ಲದ ಕೊರತೆ ಅವರನ್ನು ಯಾವತ್ತೂ ಬಾಧಿಸದ ಹಾಗೆ ನೋಡಿಕೊಳ್ಳಬೇಕು ಎಂದು. ಅಂತೂ ಗೆದ್ದೆ ಬಿಡಿ. ಮಕ್ಕಳಿಬ್ಬರನ್ನು ಅದೂ ತನ್ನದೇ ಕುಡಿಗಳನ್ನು ಹೇಗೆ ಸಾಕುತ್ತಾಳೆ ಇವಳು ಎಂದು ನೋಡಿಕೊಂಡು ಹೋಗಲೂ ಬರಲಿಲ್ಲ ನೋಡಿ ಆ ಗಂಡಸು. ಎಲ್ಲಿ ಹಾಳಾಗಿ ಹೋದನೋ. ಒಂದು ವೇಳೆ ಅವನು ಬಂದಿದ್ದರೂ ನಾನೇ ಬಿಡುತ್ತಿದ್ದೆನೋ ಇಲ್ಲವೋ.

ಮಕ್ಕಳಿಬ್ಬರನ್ನೂ ಓದಿಸಿದೆ. ನಾನು ನೀರು ಕಡಿದು ಮಲಗಿದರೂ ಮಕ್ಕಳು ಹಸಿದಿರಬಾರದು ಎಂದು ಅವುಗಳಿಗೆ ತಿನ್ನಿಸಿದೆ. ಬೆಳೆದು ದೊಡ್ಡವರಾದರು. ಕಲಿತರು. ಕೆಲಸಕ್ಕೆ ಸೇರಿದರು. ಒಳ್ಳೆಯ ಮನೆತನದ ಹೆಣ್ಣುಗಳನ್ನು ನಾನೇ ನೋಡಿ ತಂದು ಮದುವೆಯನ್ನೂ ಮಾಡಿಸಿದೆ. ಆಗಲೇ ನೋಡಿ ಕಷ್ಟ ಸುರುವಾದದ್ದು. ಸೊಸೆಯಂದಿರ ಮನೆತನ ಒಳ್ಳೆಯದು ಆದರೆ ನನ್ನ ಸೊಸೆಯಂದಿರು ಮಾತ್ರ ಒಳ್ಳೆಯವರಾಗಲಿಲ್ಲ. ಮದುವೆಯಾದ ಕೆಲವೇ ದಿನಗಳಲ್ಲಿ ತಮ್ಮ ಸ್ವಭಾವವನ್ನು ತೋರಿಸಲಾರಂಭಿಸಿದವರು ವರ್ಷ ಕಳೆಯುತ್ತಿದ್ದಂತೆ ನನ್ನನ್ನು ಮನೆಯಿಂದಲೇ ಹೊರ ಹಾಕುವ ಹುನ್ನಾರ ಮಾಡತೊಡಗಿದರು. ಸುರು ಸುರುವಿಗೆ ಹೆಂಡಂದಿರ ಮಸಲತ್ತನ್ನು ಕಂಡೂ ಸುಮ್ಮನಿರುತ್ತಿದ್ದ ನನ್ನ ಮಕ್ಕಳು ದಿನಕಳೆದಂತೆ ಹೆಂಡಂದಿರ ಜೊತೆ ತಾವೂ ಸೇರಿಕೊಂಡರು. ಅಂತೂ ನನ್ನನ್ನು ಮನೆ ಬಿಟ್ಟೋಡಿಸುವ ಹೆಂಡಂದಿರ ಯೋಜನೆಗಳಿಗೆ ಇವರೂ ಸೈ ಎನ್ನತೊಡಗಿದ್ದಷ್ಟೇ ಅಲ್ಲ ಹೆಂಡಂದಿರಿಗಿಂತ ಒಂದು ಹೆಜ್ಜೆ ಮುಂದೇ ಹೋದರು. ಅವರಿಗಾಗಿ ನಾನು ಪಟ್ಟ ಕಷ್ಟವನ್ನೆಲ್ಲ ಮರೆತರು. ಅಲ್ಲ ಆ ಹೆಂಡಂದಿರು ಮರೆಯುವಂತೆ ಮಾಡಿದರು. ಒಂದು ದಿನ ನಾನು ಪಕ್ಕದ ಬೀದಿಯಲ್ಲಿನ ದೇವಸ್ಥಾನಕ್ಕೆ ಹೋಗಿ ತಿರುಗಿ ಮನೆಗೆ ಬರುವಾಗ ರಾತ್ರಿಯಾಗಿತ್ತು. ಅಣ್ಣ ತಮ್ಮಂದಿರಿಬ್ಬರೂ ನನ್ನನ್ನು ನೋಡಿದವರೇ ಒಳಗೋಡಿ ಬಾಗಿಲನ್ನು ಹಾಕಿಕೊಂಡರು. ನಾನು ಹೊರಗೇ. ರಾತ್ರಿ ಬೇರೆ. ಎಷ್ಟು ಬಡಿದರೂ, ಗೋಗರೆದರೂ ಬಾಗಿಲನ್ನು ತೆರೆಯಲಿಲ್ಲ. ಅಲ್ಲೇ ಮೆಟ್ಟಿಲ ಮೇಲೆ ಕುಳಿತೇ ಬೆಳಗು ಮಾಡಿದ್ದೆ. ಹಸಿದ ಹೊಟ್ಟೆ. ಸೊಳ್ಳೆಗಳ ಕಾಟ ಬೇರೆ.

ಬೆಳಗಾಯ್ತು. ಇನ್ನೂ ಹೊರಗಡೆ ಕುಳಿತೇ ಇದ್ದ ನನ್ನನ್ನು ನೋಡಿದ್ದೇ ನೆರೆಕೆರೆಯವರೆಲ್ಲ ಸೇರಿದ್ದರು. ಏನೆಂದು ಕೇಳಿದವರಿಗೆ ಸತ್ಯವನ್ನು ಹೇಳದೆ ಬೇರೆ ದಾರಿಯೇ ಇರಲಿಲ್ಲ ನನಗೆ. ಅದನ್ನು ಕೇಳಿದ್ದೇ ಅವರೆಲ್ಲ ಕಿರುಚಾಡಲಿಕ್ಕೆ ತೊಡಗಿದ್ದರು. ಕೆಲವರಂತೂ ಬಾಗಿಲು ಬಡಿದು ಮಕ್ಕಳಿಬ್ಬರ ಹೆಸರನ್ನು ಹಿಡಿದು ಕೂಗಿ ಕರೆದು ಬಾಗಿಲು ತೆರೆಸಿದ್ದರು. ತೆರೆದ ಬಾಗಿಲಿನ ಮೂಲಕ ನಾನು ಒಳಗೆ ತೂರಿಕೊಳ್ಳಲು ನೋಡಿದರೆ ಮಕ್ಕಳಿಬ್ಬರೂ ನನ್ನನ್ನು ತಡೆದಿದ್ದರು.

ಪುನಃ ನಾನು ನೆರೆದಿದ್ದ ಊರವರ ಮೊರೆ ಹೋದೆ. ಅವರೆಲ್ಲ ಸೇರಿ ನನ್ನ ಮಕ್ಕಳು ಮತ್ತು ಸೊಸೆಯಂದಿರನ್ನು ಕುಳ್ಳಿರಿಸಿಕೊಂಡು ಪಂಚಾಯಿತಿ ನಡೆಸಿ ನನ್ನನ್ನು ಮನೆಯೊಳಗೆ ಕರೆದುಕೊಳ್ಳುವಂತೆ